ಅಬ್ಬರ ಹೃದಯವನ್ನು ಸುಮ್ಮನೆ ಒದ್ದೆ ಮಾಡುತ್ತಿತ್ತು. ತೋಯ್ದು ತೊಪ್ಪೆಯಾದ ಕವಾಟದ ಸಂಧಿ ಮೂಲೆಗಳಲ್ಲೆಲ್ಲಾ ನಿರ್ದಾಕ್ಷಿಣ್ಯವಾಗಿ ಸಂಚರಿಸುತ್ತಾ ಚೊಕ್ಕಟವಾಗಿ ತೊಳೆದು ಹೊರ ಧುಮ್ಮಿಕ್ಕುತ್ತಿರುವ ಕಂಬನಿಧಾರೆ. ಕೆಸರಿನಿಂದ ರಾಡಿಯೆದ್ದು ಲೋಳೆಯಾಗಿ ಕಾಲಿಟ್ಟಲ್ಲೆಲ್ಲಾ ಜಾರುವ ಅಂಗಳದಂತಾದ ಕೆನ್ನೆಯಲ್ಲಿ ಕೈಯಿಟ್ಟಲ್ಲೆಲ್ಲಾ ಅಂಟಂಟು.

ಹೊದಿಕೆ ಎಳೆದುಕೊಂಡು ಕೆನ್ನೆ ಒರೆಸಿಕೊಳ್ಳುತ್ತಾ, ಆಗಾಗ ಕೆನ್ನೆಗೆ ಅದನ್ನು ಸವರಿಕೊಳ್ಳುತ್ತಾ, ಪುರು ನಿನ್ನೆಗೆ ಹೋದ.

ತಕ್ಷಣ ಕೀಲಿ ತಿರುಗಿಸಿ ಕಬೋರ್ಡ್ ತೆರೆದ. ನಿನ್ನೆಯದಷ್ಟೇ ಅಲ್ಲ, ಒಂದು ವರುಷದ ಹಳೇ ಬಟ್ಟೆ, ಖಾಲಿ ಸೀಸ, ತುಕ್ಕು ಹಿಡಿದ ಕಬ್ಬಿಣವೆಲ್ಲಾ ದೊಪ್ಪೆಂದು ಗುಪ್ಪೆ ಬೀಳತೊಡಗಿತು. ಗಾಯವನ್ನು ಕೆರೆದುಕೊಳ್ಳುವುದೆಂದರೆ ಹೀಗೇ ಇರಬೇಕು. ಎಲ್ಲೋ ಕಾಲ ಗಂಟಲ್ಲಿ ಹಿಡಿಯಷ್ಟಗಲದಲ್ಲಿ ಬೂದಿ ಮುಚ್ಚಿದ ಕೆಂಡದಂತೆ ತೆಪ್ಪಗಿದ್ದ ಏಕ್ಸಿಮಾವನ್ನು ರಪ ರಪ ಕೆರೆದುಕೊಂಡು ಮೈಯೆಲ್ಲಾ ಹಬ್ಬಿಸಿಕೊಳ್ಳುವುದೆಂದರೆ ಇದೇ ಇರಬೇಕು. ಅದು ಹುಣ್ಣಾಗಿ ವ್ರಣವಾಗುವವರೆಗೂ ಸಮಾಧಾನವಿಲ್ಲ. ತಾನೀಗ ಏನನ್ನು ಕೆರೆದುಕೊಳ್ಳಬೇಕು ಮತ್ತು ಏನನ್ನು ಕೆರೆದುಕೊಂಡಿದ್ದಕ್ಕೆ ಇಷ್ಟು ದೊಡ್ಡ ಗಾಯವಾಗಿದೆ ಎಂದು ಗುಪ್ಪೆ ಬಿದ್ದ ಹಳೇ ಬಟ್ಟೆಯಡಿ ಹುಡುಕತೊಡಗಿದ.

ಶನಿವಾರ, ಶುಕ್ರವಾರ, ಒಂದು ವಾರ, ತಿಂಗಳು, ಮೂರು ತಿಂಗಳು, ಆರು ತಿಂಗಳು, ವರುಷ – ಓಡಿದವು. ಒಮ್ಮೆ ಹಿಂದಕ್ಕೂ, ಮತ್ತೊಮ್ಮೆ ಮುಂದಕ್ಕೂ, ನಡು ನಡುವೆ ಬ್ರೇಕ್ ಹಾಕಿ ಅವನೇ ನಿಲ್ಲಿಸುತ್ತಿದ್ದ. ಮೊದಲು ನೋಡಿದ್ದು ಲಿಫ್ಟಿನಲ್ಲೋ, ಆಫೀಸಿನ ಕ್ಯಾಂಟೀನಿನಲ್ಲೋ, ಜಿಮ್ಮಿನಲ್ಲೋ, ಕ್ಯಾಬ್‌ನಲ್ಲೋ, ಕ್ಯಾಬಿನ್ನಿನಲ್ಲೋ. ಎಲ್ಲವೂ ಪೈಪೋಟಿಗೆ ಬಿದ್ದವು. ನಿಜಕ್ಕೂ ಅವಳು ಎಲ್ಲಪ್ಪಾ ತನಗೆ ಸಿಕ್ಕೆ ಹಾಕಿಕೊಂಡಿದ್ದು?

'ಐ ಕಾಂಟ್ ಬಿಲೀವ್ ದಟ್ ಯೂ ಹ್ಯಾವ್ ಸಚ್ ಪುವರ್ ಮೆಮೋರಿ!...' ಮೊನ್ನೆ ಸುಜಾತಾ ಹಿಯಾಳಿಸಿದ ಹಾಗೇ, ತಾನೇನಾದರೂ ಮೆಮೋರಿ ಕಾರ್ಡ್ ಕಳೆದುಕೊಂಡಿರಬಹುದಾ? ತನ್ನ ಮಿದುಳೂ ಕಂಪ್ಯೂಟರ್ ಸಿಸ್ಟಮ್‌ಗೆ ಒಗ್ಗಿಹೋಗಿ, ಬೇಕಾದನ್ನಷ್ಟೇ ನೆನಪಿನಲ್ಲಿಟ್ಟುಕೊಂಡು ಬೇಡದ ಅನಾವಶ್ಯಕ ವಿವರಗಳನ್ನೆಲ್ಲಾ ಅಟೋಮ್ಯಾಟಿಕ್ಕಾಗಿ ಡಿಲೀಟ್ ಮಾಡುತ್ತಿದೆಯೇ? 'ನಿನ್ಗೂ ರೋಬೋಟ್‌ಗೂ ನೋ ಡಿಫರೆನ್ಸ್! ಯೂ ಡೋಂಟ್ ಹ್ಯಾವ್ ಎನೀ ಫೀಲಿಂಗ್ಸ್!'

ಈ ಫೀಲಿಂಗ್ಸ್ ಅನ್ನೋದು ಮೆಮೊರಿ ಕಾರ್ಡ್ ಒಳಗಿರುತ್ತಾ ಅಥವಾ ಡಿಲೀಟಾಗಿ ಹೋದ ರೀಸೈಕಲ್‌ಬಿನ್ನಿನೊಳಗೆ ಏನಾದರೂ ಗುಟ್ಟಾಗುಳಿದು, ಒಂದು ದಿನ ಇದ್ದಕಿದ್ದಂತೆ ಮತ್ತೊಮ್ಮೆ ರೀಸ್ಟೋರ್ ಮಾಡಿಕೊಂಡು ಗುಪ್ತವಾಗಿ ಕೆದಕಿಕೊಳ್ಳುವಂತಹ ನಿಗೂಢ ವಸ್ತುವಾ? ನಿನ್ನೆಯ ಹಂಗಿಲ್ಲದವನಿಗೆ ಮೆಮೋರಿಯಾದರೂ ಯಾಕೆ ಬೇಕು? ಬೇಡದ ಭೂತದ ನೆನಪನ್ನು ಅನಾವಶ್ಯಕ ಹೇರಿಕೊಂಡು, ವಜ್ಜೆ ಹೆಜ್ಜೆಗಳನ್ನಿಟ್ಟು ಮುಗ್ಗರಿಸುತ್ತಾ ವರ್ತಮಾನದಲ್ಲಿ ಬದುಕುತ್ತಿರುವವರ ಪರಂಪರೆಯೇ ಇರುವಾಗ, ಇಬ್ಬರ ಭೂತವೂ ಬೇಡವೆಂಬ ಒಡಂಬಡಿಕೆಯ ಒಪ್ಪಂದದಿಂದಲ್ಲವೇ ಇಬ್ಬರೂ ಒಟ್ಟಿಗಿರಲು ಶುರು ಮಾಡಿದ್ದು? ಒಂದು ವರುಷದ ನಂತರ ಅದ್ಯಾವ ಭೂತ ಅವಳಿಗೆ ಕಾಡಿ ವರ್ತಮಾನದಲ್ಲಿ ಅವಳನ್ನು ಹಾರಿಸಿಕೊಂಡು ಹೋಯಿತು?

ಇದೀಗ ನೋಡಿದರೆ, ಆಕಾಶವೂ ಮೂರು ದಿನಗಳಿಂದ ಚಂದಿರನನ್ನು ಕಳೆದುಕೊಂಡು ಕತ್ತಲು ಹೊದ್ದು ಅಳುತ್ತಿದೆ. ಊರೂ ಮಂಕು ಕವಿದು ಒಂದೇ ಸಮನೆ ಮೂಗು ಸುರಿಸುತ್ತಾ ನಿಂತುಕೊಂಡಿದೆ. ಕನಸು ಕಳೆದುಕೊಂಡು ತಣ್ಣಗೆ ಕೊರೆಯುತ್ತಿರುವ ಮಂಚದಲ್ಲಿ ನಿನ್ನೆಗಳ ಹಂಗಿಲ್ಲದೆ ಕೇವಲ ಇವತ್ತಿನಲ್ಲಷ್ಟೇ ಬದುಕಬೇಕೆಂಬ ಕನಸು, ಆಹಾ, ಕನಸಷ್ಟೇಯೇ?